ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಪಾ.ಅ./ಸ.ನ.ವಿ/ಪಿ.ಆರ್/104/2013-14

ಕಾರ್ಯಪಾಲಕ ಅಭಿಯಂತರರ ಕಛೇರಿ,
ಸರ್ವಜ್ಞನಗರ ವಿಭಾಗ,
7ನೇ ಮಹಡಿ, ಪಿ.ಯು.ಬಿ.ಕಟ್ಟಡ
ಎಂ.ಜಿ.ರಸ್ತೆ,ಬೆಂಗಳೂರು 560 001.
ದಿನಾಂಕ: 30.09.2013

ರವರಿಗೆ,

ಶ್ರೀ ಶ್ರೀನಿವಾಸ ರೆಡ್ಡಿ
58, ಅನ್ನಸಂದ್ರ ಪಾಳ್ಯ,,
ಶ್ರೀ ರಾಮ ದೇವಾಲಯದ ಹತ್ತಿರ,
ಹೆಚ್.ಎ.ಎಲ್ (ಪೋ)
ಬೆಂಗಳೂರು.-17

ಸರಬರಾಜು ಆದೇಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 23 ನಾಗವಾರ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಿಲೇವಾರಿಯನ್ನು ಇಲಾಖಾವತಿಯಿಂದ ಕೈಗೊಳ್ಳುವ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರು ಹೆಚ್.ಬಿ.ಆರ್ ಲೇಔಟ್ ಉಪವಿಭಾಗರವರು ಪೌರ ಕಾರ್ಮಿಕರು ಮತ್ತು ವಾಹನಗಳ ಸರಬರಾಜಿಗಾಗಿ ಕೊಟೇಶನ್ ಕರೆದಿದ್ದು ಅದಕ್ಕೆ ತಾವು ಭಾಗವಹಿಸಿ ಅತಿ ಕಡಿಮೆ ದರಗಳಾದ ರೂ. 14,29,271/- (ಹದಿನಾಲ್ಕು ಲಕ್ಷ ಇಪ್ಪತ್ತೊಂಬತ್ತು ಸಾವಿರದ ಎರಡು ನೂರ ಎಪ್ಪತ್ತೊಂದು)ಗಳನ್ನು ಪ್ರತಿ ತಿಂಗಳಿಗೆ ನಮೂದಿಸಿದ್ದು, ಸದರಿ ಮೊತ್ತವು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿದ್ದು, ತಮಗೆ ದಿನಾಂಕ 01.10.2013ರಿಂದ ಅನ್ವಯವಾಗುವಂತೆ ಸರಬರಾಜು ಆದೇಶವನ್ನು ನೀಡಲಾಗಿದೆ. ಈ ಸರಬರಾಜು ಆದೇಶವು 01.10.2013 ರಿಂದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ತಾವು ಸರಬರಾಜು ಮಾಡಬೇಕಾದ ಪೌರ ಕಾರ್ಮಿಕರು ಮತ್ತು ವಾಹನಗಳ ವಿವರಗಳು ಈ ಕೆಳಕಂಡಂತೆ ಇವೆ.

1) ಪೌರಕಾರ್ಮಿಕರು ಮತ್ತು ತಳ್ಳುವ ಗಾಡಿಗಳು	56 ಸಂಖ್ಯೆಗಳು.
2) ಕಂಪ್ಯಾಕ್ಟರ್ ವಾಹನ ಚಾಲಕರ ಸಮೇತ ಒಬ್ಬರು ಸಹಾಯಕರು	01 ಸಂಖ್ಯೆ
3) ಟಿಪ್ಪರ್ ವಾಹನ ಚಾಲಕರ ಸಮೇತ ನಾಲ್ಕು ಸಹಾಯಕರು	01 ಸಂಖ್ಯೆ
4) ಆಟೋ ಟಿಪ್ಪರ್ ಚಾಲಕರ ಸಮೇತ ಒಬ್ಬರು ಸಹಾಯಕರು	19 ಸಂಖ್ಯೆಗಳು
5) ತಳ್ಳುವ ಗಾಡಿಗಳು ಮತ್ತು ಒಬ್ಬರು ಸಹಾಯಕರು	04 ಸಂಖ್ಯೆಗಳು
6) ಮೇಲ್ವಿಚಾರಕರು	03 ಸಂಖ್ಯೆಗಳು

ಸದರಿ ಆದೇಶದ ಪ್ರಕಾರ ಷರತ್ತುಗಳು ಅನ್ವಯಿಸುತ್ತವೆ.

1) ಕಾರ್ಮಿಕರ ಇ.ಎಸ್.ಐ.ಮತ್ತು ಪಿ.ಎಫ್ ಅನ್ನು ಪ್ರತಿ ತಿಂಗಳು ಇಲಾಖೆಗೆ ಪಾವತಿಸಿ ಅದರ ವಿವರಗಳನ್ನು ಈ ಕಛೇರಿಗೆ ಸಲ್ಲಿಸುವುದು.
2) ತಾವು ಸರಬರಾಜು ಮಾಡುವ ವಾಹನಗಳನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿ ಹಾಗೂ ಚಾಲಕರಿಗೆ ಪರವಾನಗಿ ಕಡ್ಡಾಯವಾಗಿ ಇರತಕ್ಕದ್ದು.
3) ಪೌರಕಾರ್ಮಿಕರು ತಮ್ಮ ಅಧೀನದಲ್ಲಿದ್ದು ಅವರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ಕಾರ್ಮಿಕರೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲ.
4) ಪೌರ ಕಾರ್ಮಿಕರಿಗೆ ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಶುಚಿತ್ವ ಸಾಮಗ್ರಿಗಳನ್ನು ತಾವೇ ನೀಡತಕ್ಕದ್ದು.

ಕಾರ್ಯಪಾಲಕ ಅಭಿಯಂತರರು
ಸರ್ವಜ್ಞನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ